# ಚಲನಚಿತ್ರದಲ್ಲಿನ ಲಿಂಗ ಸಂಬಂಧಿತ ಸಮಸ್ಯೆಗಳು

ಎಸ್.ಯು. ಪ್ರಜ್ವಲಾ

ಉಪನ್ಯಾಸಕರು, ಕನ್ನಡ ವಿಭಾಗ, ಶ್ರೀ ಜೆ. ಸಿ. ಬಿ. ಎಂ. ಕಾಲೇಜು, ಶೃಂಗೇರಿ, ಚಿಕ್ಕಮಗಳೂರು.

## ABSTRACT:

ಚಲನಚಿತ್ರವು ಸಮಾಜದ ಜೀವನಶೈಲಿ ಸಂಸ್ಕೃತಿಯ ಪ್ರತಿಬಿಂಬ. ಹಾಗೂ ಸಮಾಜದ ಮೇಲೆ ಪ್ರಭಾವ ಬೀರುವ ಶಕ್ತಿಯುತವಾದ ಮಾಧ್ಯಮವಾಗಿದೆ. ಆದರೆ ಇದರಲ್ಲಿ ಲಿಂಗ ಸಂಬಂಧಿತ ಅಸಮಾನತೆ ಹಾಗೂ ಸವಾಲುಗಳು ಹೆಚ್ಚಿವೆ. ಈ ಪ್ರಬಂಧವು ಸಿನಿಮಾ ಮಾಧ್ಯಮದಲ್ಲಿ ಲಿಂಗಗಳ ಆಧಾರದ ಮೇಲೆ ನಡೆಯುತ್ತಿರುವ ತಾರತಮ್ಯ ಹಾಗೂ ತುಳಿತ ಮತ್ತು ಸಂವೇದನೆ ಸಂಬಂಧಿತ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಚಿತ್ರೋದ್ಯಮವು ಒಂದು ಸಾರ್ವಜನಿಕ ಅರಿವು, ವಿನೋದ ಹಾಗೂ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ಪ್ರಧಾನವಾದ ಮಾಧ್ಯಮವಾಗಿದೆ. ಅದರಲ್ಲಿ ನಡೆಯುವ ಮಹಿಳಾ ಪಾತ್ರಗಳ ಚಿತ್ರಣ, ಲಿಂಗ ಅಸಮಾನತೆ, ಶೋಷಣೆ, ದೇಹ ಸೌಂದರ್ಯವನ್ನು ಪ್ರಧಾನವಾಗಿರಿಸಿ ಚಿತ್ರಿಸುವುದು ಹಾಗೂ ಲೈಂಗಿಕ ಶೋಷಣೆಗಳು ಮತ್ತು ಲಿಂಗಗಳ ಆಧಾರದ ಮೇಲೆ ನಡೆಯುವ ಭತ್ಯೆ ವಿತರಣೆಯು ಸೇರಿದ ಸಮಸ್ಯೆಗಳಾಗಿವೆ.

ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳು, ಕೌಶಲ್ಯ ಹೊಂದಿದ ಅಥವಾ ಹೊಂದಿರದ ಸಂವೇದನಶೀಲ ಪಾತ್ರಗಳ ಕೊರತೆ, ಜಾಹೀರಾತುಗಳಲ್ಲಿ ಸ್ತ್ರೀಯರನ್ನು ತೊಡಗಿಸಿಕೊಳ್ಳುವ ರೀತಿ ಇವು ಸಮಾಜದ ಮೇಲೆ ಬೀರುತ್ತಿರುವ ಪರಿಣಾಮಗಳು ಈ ಪ್ರಬಂಧದ ಪ್ರಮುಖ ಚಿಂತನೆಗಳಾಗಿವೆ. ಜೊತೆಗೆ ಭಾರತೀಯ ಹಾಗೂ ಕನ್ನಡ ಚಿತ್ರರಂಗ ಉದ್ಯಮದಲ್ಲಿ ಲಿಂಗ ಅಸಮಾನತೆಯ ಶ್ರೇಣಿಗಳನ್ನು ವಿಶ್ಲೇಷಿಸಲಾಗಿದ್ದು, ಸಮಾಜದಲ್ಲಿ ಸಮಾನವಾದ ಲಿಂಗ ಭಾವನೆಗಳು ಚಿತ್ರ ಮಾಧ್ಯಮದಲ್ಲಿ ಹೇಗೆ ಬಳಸಬೇಕು ಎಂದು ವಿವರಿಸಲಾಗಿದೆ.

## KEYWORDS:

ಚಿತ್ರರಂಗದಲ್ಲಿ ಸ್ತ್ರೀಯರ ಸ್ಥಾನಮಾನ, ಶೋಷಣೆ, ಲಿಂಗ ಆಧಾರಿತ ಅಸಮಾನತೆ.

### 1. ಭತ್ಯೆಯಲ್ಲಿ ತಾರತಮ್ಯತೆ:

ಲಿಂಗಸ್ವರೂಪ, ಪ್ರಾಯೋಗಿಕ ಜ್ಞಾನ, ಪ್ರಭಾವ ಮತ್ತು ಸಾಮಾಜಿಕ ಹಿನ್ನಲೆ ಮುಂತಾದ ಅಂಶಗಳು ಭತ್ಯೆ ಅಸಮಾನತೆಯನ್ನು ನಿರ್ಧರಿಸುತ್ತವೆ. ಸಾಮಾನ್ಯವಾಗಿ ಪುರುಷ ನಟರಿಗೆ ಮಹಿಳಾ ನಟಿಯರಿಗಿಂತ ಹೆಚ್ಚು ಅವಕಾಶ ಹಾಗೂ ವೇತನ

ದೊರೆಯುವುದರೊಂದಿಗೆ ಮಹಿಳಾ ನಾಯಕಿಯರು ಕಡಿಮೆ ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ನಿರ್ದೇಶಕ, ಛಾಯಾಗ್ರಾಹಕ ಸಂಕಲನಕಾರ ಮುಂತಾದ ತಾಂತ್ರಿಕ ಸಿಬ್ಬಂದಿಯಲ್ಲಿ ಮಹಿಳೆಯರಿಗೆ ಹೋಲಿಸಿದರೆ ಪುರುಷರ ಸಂಖ್ಯೆಯೇ ಹೆಚ್ಚು ಹಾಗೂ ಹಿನ್ನೆಲೆಯುಳ್ಳ ಸ್ಟಾರ್ ನಟರು ನಿರ್ಮಾಪಕರೊಂದಿಗೆ ಉತ್ತಮ ಸಂಪರ್ಕ ಹೊಂದಿರುವುದು ಮತ್ತು ಜನಪ್ರಿಯತೆಯನ್ನು ಹೊಂದಿರುತ್ತಾರಾದ್ದರಿಂದ ಹೊಸ ಪ್ರತಿಭೆಗಳಿಗೆ ಸಣ್ಣ ಪಾತ್ರಗಳನ್ನು ನೀಡಿ ಸಂಬಳವನ್ನು ಕಡಿಮೆ ನೀಡುತ್ತಾರೆ. ಅವರಿಗೆ ಸಮಾನ ಅವಕಾಶವಿಲ್ಲ. ಜಾತಿ ಮತ್ತು ಸಾಮಾಜಿಕ ಹಿನ್ನಲೆಯಿಂದಲೂ ಪ್ರಭಾವ, ಸಂಪರ್ಕ ಹೊಂದಿರುವವರು ಹೆಚ್ಚಿನ ವೇತನ ಪಡೆಯುವ ಸಾಧ್ಯತೆ ಹೆಚ್ಚು.

**2. ಲಿಂಗ ಮೌಲ್ಯಾಧಾರಿತ ಚಿತ್ರಣ:**

ಇದು ಒಂದು ಚಲನಚಿತ್ರದಲ್ಲಿ ಸ್ತ್ರೀಯರು ಮತ್ತು ಪುರುಷರು ಹೇಗೆ ಪ್ರತಿಬಿಂಬಿತವಾಗುತ್ತಾರೆ ಎಂಬುದನ್ನು ಸೂಚಿಸುತ್ತದೆ. ಇದು ಸಕಾರಾತ್ಮಕವೂ ಆಗಿರಬಹುದು, ನಕಾರಾತ್ಮಕವೂ ಆಗಿರಬಹುದು. ಸಾಮಾನ್ಯವಾಗಿ ಚಲನಚಿತ್ರಗಳಲ್ಲಿ ಪುರುಷರನ್ನು ಬಲಿಷ್ಠರಾಗಿಯೂ, ಶೌರ್ಯವಂತರಾಗಿಯೂ ತೀರ್ಮಾನಶೀಲತೆ, ದೃಢತೆ, ನಾಯಕತ್ವ ಗುಣಗಳಿಂದ ಕೂಡಿರುವ ವ್ಯಕ್ತಿಗಳಾಗಿ ತೋರಿಸಲಾಗುತ್ತದೆ. ಅದೇ ಮಹಿಳೆಯರನ್ನು ಶಾಂತ, ನಿರ್ಧಾರವಿಲ್ಲದ, ಸಹಾಯಕ ಪಾತ್ರಗಳಲ್ಲಿಯೂ, ಇನ್ನು ಕೆಲವು ವೇಳೆ ಕೇವಲ ಆಕರ್ಷಣಾ ಸಾಧನವಾಗಿ ಬಿಂಬಿಸಲಾಗುತ್ತದೆ. ಲಿಂಗಾಂತರ ವ್ಯಕ್ತಿಗಳನ್ನು, ವಿನೋದ, ವಿಚಿತ್ರ ವ್ಯಕ್ತಿಗಳಂತೆ ತೋರಿಸಲಾಗುವುದು. ಮುಖ್ಯ ಪಾತ್ರಗಳು ಹೆಚ್ಚಿನ ಬಾರಿ ಪುರುಷರಿಗೇ ಸೀಮಿತವಾಗಿರುತ್ತದೆ. ಮಹಿಳಾ ಪಾತ್ರಗಳು ಪುರುಷರ ಪೂರಕ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ. ಜಾಹೀರಾತುಗಳಲ್ಲಿಯೂ ಈ ತಾರತಾಮ್ಯತೆ ಕಾಣಬಹುದು. ಗೃಹೋಪಯೋಗಿ ವಸ್ತುಗಳ ಜಾಹೀರಾತುಗಳಲ್ಲಿ ಮಹಿಳೆಯರನ್ನು, ವಾಣಿಜ್ಯ ಸಂಬಂಧಿತ ವಸ್ತುಗಳ ಜಾಹೀರಾತುಗಳಲ್ಲಿ ಪುರುಷರನ್ನು ಬಳಸಿಕೊಳ್ಳುವುದನ್ನು ನೋಡಬಹುದು. ಕೆಲವು ಜಾಹೀರಾತುಗಳಲ್ಲಿ ಸ್ತ್ರೀಯರನ್ನು ಅನವಶ್ಯಕವಾಗಿ ಅರೆಬೆತ್ತಲಾಗಿ ತಮ್ಮ ವಸ್ತುವಿನ ವ್ಯಾಪಾರೀಕರಣಕ್ಕಾಗಿ ಬಳಸಿಕೊಳ್ಳವುದನ್ನು ಗಮನಿಸಬಹುದು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮಹಿಳೆಯರನ್ನು ಈ ರೀತಿ ದುರ್ಬಲರನ್ನಾಗಿ ಚಿತ್ರಿಸುವುದರಿಂದ ಸಮಾಜದಲ್ಲೂ ಅದೇ ಪರಿಕಲ್ಪನೆ ಮುಂದುವರೆಯುವ ಸಾಧ್ಯತೆ ಹೆಚ್ಚು.

**3. ಮಾಧ್ಯಮ ಮತ್ತು ಪುರುಷ ಪ್ರೇಕ್ಷಕ ಸಮುದಾಯಕ್ಕಾಗಿನ ಸ್ತ್ರೀಯರ ಬಳಕೆ:**

ಚಿತ್ರರಂಗ ಹಾಗೂ ಮಾಧ್ಯಮವು ಸಮಾಜದ ಪ್ರಭಾವಿ ಘಟಕಗಳಾಗಿದ್ದು, ಸಾಮಾನ್ಯವಾಗಿ ಪುರುಷ ಪ್ರೇಕ್ಷಕ ಸಮುದಾಯವನ್ನು ಆಕರ್ಷಿಸಲು ಮಹಿಳಾ

ಪಾತ್ರಗಳನ್ನು ಕೇವಲ ಅವರ ಆಸಕ್ತಿಗನುಗುಣವಾಗಿ ಬಳಸುವ ಪ್ರಯತ್ನ ಮಾಧ್ಯಮದಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಇದನ್ನು 'ಪುರುಷ ದೃಷ್ಟಿಯ ಪರಿಕಲ್ಪನೆ' ಎಂದೂ ಕರೆಯಬಹುದು. ಇಲ್ಲಿ ಮಹಿಳೆಯರಿಗೆ ಸ್ವತಂತ್ರ ಅಸ್ತಿತ್ವವಿಲ್ಲದೆ ಪುರುಷರ ತೃಪ್ತಿಗಾಗಿ ರೂಪಿಸಲಾದ ವಸ್ತುಗಳಾಗಿ ಚಿತ್ರಿಸಲಾಗುತ್ತದೆ. ಉದಾಹರಣೆಗೆ ಅನವಶ್ಯಕವಾದ ಐಟಂ ಸಾಂಗ್‌ಗಳು ಅದರಲ್ಲಿನ ಉಡುಗೆ-ತೊಡುಗೆ, ಚಲನವಲನ, ಸಾಹಿತ್ಯವು ಪುರುಷ ಸಮುದಾಯಕ್ಕೆ ಆಕರ್ಷಕವಾಗುವಂತೆ ಸ್ತ್ರೀಯರನ್ನು ಬಳಸಿಕೊಳ್ಳುವುದು.

ಮಹಿಳೆಯರ ದೇಹವನ್ನು ಬಳಸಿ, ತುಂಡುಡುಗೆ ತೊಡಿಸಿ, ವಾಣಿಜ್ಯ ಜಾಹೀರಾತುಗಳಲ್ಲಿ ಕೇವಲ ವಸ್ತುವಾಗಿ ಬಳಸುವುದು, ಮಹಿಳೆಯರ ನಡವಳಿಕೆಯನ್ನು ಅವರ ಸ್ವಭಾವವನ್ನು ತಮಾಷೆಯ ವಿಷಯವನ್ನಾಗಿ ಬಳಸಿ ಮನರಂಜನೆ ಪಡೆಯುವುದು. ಇಂತಹ ಚಿತ್ರಣಗಳಿಂದ ಮಹಿಳೆಯರ ಆತ್ಮವಿಶ್ವಾಸ ಕುಗ್ಗುವುದು, ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ ಶೋಷಣೆಯ ಪ್ರಮಾಣವು ಹೆಚ್ಚುವುದು.

**4. ಶಕ್ತಿಯುತ ಮಹಿಳಾ ಪಾತ್ರಗಳ ನಿರ್ಲಕ್ಷಣ:**

ಮಹಿಳಾ ಪಾತ್ರಗಳು ಹೆಚ್ಚಿನ ಪಾಲು ಪುರುಷ ಪಾತ್ರಗಳಿಗೆ ಸಹಾಯಕ ರೀತಿಯಲ್ಲಿಯೇ ಉಳಿದಿದೆ. ಮಹಿಳಾ ಪಾತ್ರ ಇರುವ ಚಿತ್ರಗಳಿಗೆ ಬೇಕಾದಷ್ಟು ಬಜೆಟ್, ಪ್ರಚಾರಕ್ಕಿನ ಪ್ರಾಮುಖ್ಯತೆ ಕಡಿಮೆ. ಪುರುಷ ದೃಷ್ಟಿಕೋನದಿಂದ ರಚನೆಯಾದ ಕಥೆಗಳಿಂದ ಮಹಿಳೆಯರ ಬದುಕಿನ ಚಿತ್ರಣ ದೊರೆಯುವಂತಾಗುವುದು ಇನ್ನೂ ಸಮಸ್ಯೆಗಳಾಗಿವೆ. ಇಲ್ಲಿ ಮಹಿಳಾ ದೃಷ್ಟಿಕೋನದ ನಿಖರತೆ ಇರುವುದು ಕಡಿಮೆ, ಬಲಿಷ್ಠ ಪಾತ್ರಗಳನ್ನು ಗ್ಲಾಮರ್ ಆಧಾರಿತವಾಗಿ ಚಿತ್ರಿಸುವುದು. ಅವರ ಬದುಕಿನ ಹೋರಾಟವನ್ನು ವ್ಯಾಪಾರ ವೃದ್ಧಿ ತಂತ್ರವಾಗಿ ಬಳಸುವುದರಿಂದ ನೈಜ ಸಮಸ್ಯೆಗಳು ಹೊರಬರುವುದೇ ಇಲ್ಲ. ಕೆಲವು ಸಿನಿಮಾಗಳಲ್ಲಿ ಮಹಿಳಾ ಪಾತ್ರಕ್ಕೆ ಪ್ರಾಧಾನ್ಯತೆ ಇದ್ದರೂ ಅದು ಸೀಮಿತ ಅವಕಾಶ, ನೈಜತೆಯ ಕೊರತೆಯಿಂದ ಕೂಡಿದ್ದು ಚಲನಚಿತ್ರಗಳಲ್ಲಿ ಮಹಿಳಾ ಪಾತ್ರಗಳನ್ನು ಗಂಭೀರವಾಗಿ ಪರಿಗಣಿಸದಿರುವುದೂ ಆಗಿದೆ.

**5. ಮಹಿಳೆಯರ ಪ್ರಾತಿನಿಧ್ಯದ ಕೊರತೆ:**

ಚಲನಚಿತ್ರಗಳಲ್ಲಿ ಮಹಿಳೆಯರ ಪಾತ್ರಗಳಿದ್ದರೂ ಅದು ಸಹೃದಯಿ ತಾಯಿಯೋ? ಇಲ್ಲವೇ ಪ್ರೇಮಿಯಾಗಿ ಚಿತ್ರಿತವಾಗುವುದು. ಮೂರು ಗಂಟೆಯ ಸಿನಿಮಾದಲ್ಲಿ ನಾಯಕಿಯರದ್ದು ಕೇವಲ ಕಾಲು ಭಾಗವಷ್ಟೇ ಪಾತ್ರವಿದ್ದು, ಅದರಲ್ಲಿಯೂ ಅವರ ಅಂದ, ದೈಹಿಕ ಆಕರ್ಷಣೆಯು ಹೆಚ್ಚು ಮಹತ್ವ ಪಡೆಯುತ್ತಿರುವುದು ವಿಷಾದನೀಯವಾಗಿದೆ. ಇದರಿಂದಾಗಿ ಸಮಾಜದಲ್ಲಿರುವ ಆಕೆಯ ಸ್ಥಾನಕ್ಕೆ ಧಕ್ಕೆಯಾಗುವ ಸಾಧ್ಯತೆಯೇ ಹೆಚ್ಚು. ಕೇವಲ ಬೆರಳೆಣಿಕೆಯಷ್ಟು

ಚಿತ್ರಗಳು ಮಾತ್ರ ಮಹಿಳೆಯರ ಪ್ರಾತಿನಿಧ್ಯತೆಯನ್ನು ಸಾಬೀತುಪಡಿಸುತ್ತಿದ್ದು, ಮಹಿಳೆಯ ಪ್ರಾತಿನಿಧ್ಯ ಹೆಚ್ಚಳವು ಸಮಾಜದಲ್ಲಿ ಲಿಂಗ ಸಮಾನತೆಯ ಮೇಲೆ ಸಕಾರಾತ್ಮಕ ಪ್ರಭಾವ ಬೀರಲು ಸಾಧ್ಯವಾಗುವುದು. ಆದ್ದರಿಂದ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ, ಬೌದ್ಧಿಕವಾಗಿ ಸಮಾನವಾಗಿರುವಂತೆ ವ್ಯಕ್ತಪಡಿಸುವ ಕೆಲಸವನ್ನು ಚಲನಚಿತ್ರಗಳ ಮೂಲಕ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅಷ್ಟೇ ಅಲ್ಲದೇ ಹೆಚ್ಚಿನ ನಟರಿಗೆ ಎಷ್ಟು ವಯಸ್ಸಾದರೂ ಅವರಿಗೆ ಮುಖ್ಯ ಪಾತ್ರಗಳನ್ನು ನೀಡಲಾಗುತ್ತಿದ್ದು, ನಟಿಯರಿಗೆ ಈ ಅವಕಾಶ ನೀಡಲಾಗುವುದಿಲ್ಲ. ನಟಿಯರು ಒಮ್ಮೆ ಮದುವೆಯಾದರೆ ಸಾಕು ಅದೇ ಮಾನದಂಡವೆಂಬಂತೆ ಅವರು ಅವಕಾಶಗಳಿಂದ ವಂಚಿತರಾಗುವುದನ್ನು ಕಾಣಬಹುದಾಗಿದೆ.

**6. LGBTQ + ಪ್ರತಿನಿಧಿ:**

ಸಿನಿಮಾ ಕೇವಲ ಮನರಂಜನೆಯ ಮಾಧ್ಯಮವಾಗಿರದೆ ಸಮಾಜದ ಚಿಂತನೆಗಳನ್ನು ಪ್ರತಿಬಿಂಬಿಸುವ ಆಯುಧವಾಗಿದೆ. ಆದಾಗ್ಯೂ ಲೆಸ್ಬಿಯನ್, ಗೇ, ಬೈಸೆಕ್ಶುಯಲ್, ಟ್ರಾನ್ಸ್‌ಜಂಡರ್, ಕುಯರ್ ಹಾಗೂ ಇತರರ ಸಮುದಾಯವನ್ನು ಬಿಟ್ಟು ಅಥವಾ ನಕಾರಾತ್ಮಕವಾಗಿ ಚಿತ್ರಿತವಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ಕೆಲವು ಚಲನಚಿತ್ರಗಳಲ್ಲಿ ಈ ಸಮುದಾಯವನ್ನು ತಮಾಷೆಯಾಗಿ, ಅಸಹಜ ರೀತಿಯಲ್ಲಿ ಅಪಮಾನಕರವಾಗಿ ಚಿತ್ರಿಸುವುದು ಸಮಾಜದಲ್ಲಿ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ತಪ್ಪು ಕಲ್ಪನೆ ಬೆಳೆಯಲು ಉತ್ತೇಜನ ದೊರಕಿದಂತಾಗುವುದು. ಆದರೆ, ಇತ್ತೀಚೆಗೆ ಈ ದೃಷ್ಟಿಕೋನದಲ್ಲಿ ಬದಲಾವಣೆ ಕಂಡುಬರುತ್ತಿದ್ದರೂ ಪ್ರಮಾಣ ಕಡಿಮೆ ಎನ್ನಬಹುದು.

**7. # Me Too ಚಳುವಳಿ & ಹಿಂಸೆ:**

ಸಮಾಜದಲ್ಲಿನ ಮಹಿಳೆಯರು ಹಾಗೂ ಲಿಂಗ ವೈವಿಧ್ಯತೆಗೊಳಪಟ್ಟ ಜನರು ಅನುಭವಿಸುತ್ತಿರುವ ಲೈಂಗಿಕ ಹಿಂಸೆಗೆ ವಿರುದ್ಧವಾಗಿ ಹುಟ್ಟಿಕೊಂಡ ಶಕ್ತಿಶಾಲಿ ಚಳುವಳಿಯೇ # Me Too ಚಳುವಳಿ. ಈ ಚಳುವಳಿಯಿಂದ ಮಹಿಳೆಯರು ತಮ್ಮ ಮೇಲಾಗುವ ಹಿಂಸೆಯನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವ ಮೂಲಕ ಹಿಂಸೆಯ ಎದುರು ನಿಲ್ಲುವ ಧೈರ್ಯವನ್ನು ಮಾಡತೊಡಗಿದರು. ಈ ಚಳುವಳಿಯು 2006 ರಲ್ಲಿ ಅಮೇರಿಕಾದ ಸಾಮಾಜಿಕ ಕಾರ್ಯಕರ್ತೆ ಟಾರಾನಾ ಬರ್ಕ್ ಅವರಿಂದ ಮೊದಲ್ಗೊಂಡು, ನಂತರ 2017 ರಲ್ಲಿ ನಟಿ ಅಲಿಸಾ ಮಿಲಾನೋ ಎಂಬ ಹಾಲಿವುಡ್ ನಟಿ ತನ್ನ ಮೇಲಾದ ಲೈಂಗಿಕ ಶೋಷಣೆಯ ವಿರುದ್ದ # Me Too ಅಭಿಯಾನ ಆರಂಭಿಸಿ ಜಾಗತಿಕ ಮಟ್ಟಕ್ಕೆ ತಂದರು. ಇದು ನಂತರ 2018 ರಲ್ಲಿ ಭಾರತದಲ್ಲಿಯೂ ಅನೇಕ ನಟಿಯರು ತಮ್ಮ ಶೋಷಣೆಯ ಅನುಭವಗಳನ್ನು ಹಂಚಿಕೊಳ್ಳಲಾರಂಭಿಸಿದರು.

ಈ ಹ್ಯಾಶ್ಟ್ಯಾಗ್ ಕೇವಲ ಒಂದು ಚಳುವಳಿಯಾಗಿರದೇ ಶೋಷಣೆಗೆ ಒಳಗಾದ ಮಹಿಳೆಯರ ಧ್ವನಿಯಾಗಿ ಕಾರ್ಯನಿರ್ವಹಿಸಿತು.

ಇದರಿಂದ ಸಕಾರಾತ್ಮಕ ಬದಲಾವಣೆಯನ್ನೂ ಕಂಡೆವು. ಅವುಗಳಲ್ಲಿ, ಲೈಂಗಿಕ ಶೋಷಣೆ ಖಾಸಗಿ ವಿಷಯವಲ್ಲ ಎಂಬ ಅರಿವು ಬರುವುದರೊಂದಿಗೆ ಮಹಿಳೆಯರಿಗೆ ಧೈರ್ಯ ತುಂಬಿ ಮುಕ್ತ ವೇದಿಕೆ ದೊರೆತಂತಾಯಿತು, ಲೈಂಗಿಕ ಶೋಷಣೆ ಕುರಿತು ಒಳ್ಳೆ ನೀತಿ ರೂಪಿಸಲು ಸಾಧ್ಯವಾಯಿತು. ಆದಾಗ್ಯೂ ಕೆಲವರು ಈ ಚಳುವಳಿಯನ್ನು ದುರುಪಯೋಗ ಮಾಡುತ್ತಿದ್ದಾರೆ ಎಂಬ ಟೀಕೆಗಳೂ ಬಂದವು.

**ಪರಿಹಾರೋಪಾಯಗಳು:**

» ನಟ ನಟಿಯರು ಹಾಗೂ ತಂತ್ರಜ್ಞರಿಗೆಲ್ಲರಿಗೂ ಸಮಾನ ಪಾವತಿ ವ್ಯವಸ್ಥೆ ರೂಪಿಸುವುದರೊಂದಿಗೆ ವೇತನದ ಪಾರದರ್ಶಕತೆಯನ್ನು ಪಾಲಿಸಬೇಕು. ಭತ್ಯೆಯಲ್ಲಿನ ಅಸಮಾನತೆಯನ್ನು ತಡೆಯಲು ಸರಿಯಾದ ನೀತಿಗಳನ್ನು ರೂಪಿಸುವುದರಿಂದ ಮಹಿಳೆಯರಿಗೂ ಪುರುಷರಿಗೂ ಸಮಾನತೆ ತರುವುದು.

» ಚಲನಚಿತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೂ ಪ್ರಧಾನ ಪಾತ್ರ ನೀಡುವುದು. ಯಾವುದೇ ಪೂರ್ವಾಗ್ರಹ ಪೀಡಿತ ನಿರ್ಧಾರಗಳಿಂದ ಅವಕಾಶ ವಂಚಿತರಾಗದಂತೆ ನಿಜವಾದ ಪ್ರತಿಭೆಗಳಿಗೆ ಅವಕಾಶ ದೊರೆಯುವಂತಾಗಬೇಕು.

» ಮಹಿಳೆಯ ನಾಯಕತ್ವ ಪಾತ್ರಗಳನ್ನು ಹೆಚ್ಚಿಸುವುದರೊಂದಿಗೆ ಸಮಾನತೆ ಚಿತ್ರಿಸುವಂತಹ, ವೈವಿಧ್ಯಮಯ ಕಥೆಗಳ ಅವಶ್ಯಕತೆ ಇದೆ. ಚಲನಚಿತ್ರ ನಿರ್ಮಾಪಕರು ಮತ್ತು ಮಾಧ್ಯಮ ಸಂಸ್ಥೆಗಳು ಲೈಂಗಿಕೀಕರಣಕ್ಕಿಂತ ಉತ್ತಮ ಕಥೆಯನ್ನೊಳಗೊಂಡ ಚಲನಚಿತ್ರಗಳತ್ತ ಗಮನ ಹರಿಸಬೇಕು. ಮಾಧ್ಯಮವು ಪುರುಷ ದೃಷ್ಟಿಕೋನಕ್ಕೆ ಬದಲಾಗಿ ಸ್ತ್ರೀ–ಪುರುಷ ಸಮಾನತೆಯ ದೃಷ್ಟಿಕೋನದಲ್ಲಿರುವ ಕಥೆಗಳತ್ತ ಗಮನ ಹರಿಸುವುದು ಉತ್ತಮ.

» ಮಹಿಳಾ ಪ್ರಧಾನ ಚಲನಚಿತ್ರಗಳನ್ನು ನೈಜ ಕಥೆಗಳನ್ನಾಧರಿಸಿದಂತೆ ಚಿತ್ರಿತಗೊಳಿಸುವುದು ಜೊತೆಗೆ ಸಮಾನ ಪ್ರಾಮುಖ್ಯತೆ ನೀಡುವುದು. ಮಹಿಳಾ ನಿರ್ದೇಶಕರು, ಬರಹಗಾರರಿಗೆ ಹೆಚ್ಚಿನ ಅವಕಾಶ ನೀಡುವುದು.

» LGBTQ + ಈ ಸಮುದಾಯವೂ ಕೂಡ ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿದೆ. ಅವರಿಗೂ ಸಮಾನ ಸ್ಥಾನ, ಗೌರವ ದೊರಕಿದರೆ

ಮಾತ್ರವೇ ನಿಜವಾದ ಪ್ರಗತಿಗೆ ನಾವು ಹೆಜ್ಜೆ ಹಾಕಿದಂತಾಗುವುದು ಚಿತ್ರಮಾಧ್ಯಮವು ಈ ಬದಲಾವಣೆಗೆ ಬಲವಾದ ಶಕ್ತಿ ಮಾರ್ಗವಾಗಿ ಕಾರ್ಯನಿರ್ವಹಿಸಬೇಕು.

» ಮಹಿಳಾ ನಟಿಯರ ಮೇಲಾಗುವ ಲೈಂಗಿಕ ಶೋಷಣೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

ಹೀಗೆ ಮುಂತಾದ ಕ್ರಮ ಕೈಗೊಳ್ಳುವ ಮೂಲಕ ಚಿತ್ರಮಾಧ್ಯಮದಲ್ಲಾಗುತ್ತಿರುವ ಲಿಂಗ ತಾರತಾಮ್ಯತೆಯನ್ನು ತಡೆಯಬಹುದು.

**ಉಪಸಂಹಾರ:**

ಚಲನಚಿತ್ರ ಮಾಧ್ಯಮವು ಕೇವಲ ಕಲೆ, ಮನೋರಂಜನೆಯ ಮಾಧ್ಯಮ ಮಾತ್ರವಾಗಿರದೆ, ಇದೊಂದು ಸಾಮಾಜಿಕ ಜವಾಬ್ದಾರಿ ಹೊಂದಿರುವ ಪ್ರಭಾವಶಾಲಿ ಮಾಧ್ಯಮವಾಗಿದೆ. ಇದು ಮನಸ್ಸು ಮಾಡಿದರೆ ಸಮಾಜದ ಅಸಮತೋಲನವನ್ನು ತೊಲಗಿಸಲು ಪ್ರಯತ್ನಿಸಲೂಬಹುದು. ಅದೇ ನಕಾರಾತ್ಮಕವಾಗಿ ಬಿಂಬಿಸಿದರೆ ಅದೇ ಅಸಮತೋಲನವು ಹೆಚ್ಚಳಗೊಳ್ಳಲೂಬಹುದು. ಆದರೂ ಇಂದಿಗೂ ಚಿತ್ರರಂಗದಲ್ಲಿ ಲಿಂಗ ಅಸಮಾನತೆಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಮಹಿಳೆಯರನ್ನು ಅಥವಾ ಲಿಂಗ ವೈವಿಧ್ಯತೆಯ ಪಾತ್ರಗಳು ಬಹುಪಾಲು ಪೂರಕ ಪಾತ್ರಗಳಿಗೆ ಸೀಮಿತಗೊಳಿಸಲಾಗುತ್ತದೆ. ಇದರಿಂದ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದರೆ ಈ ಪರಿಸ್ಥಿತಿಯನ್ನು ಬದಲಾಯಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ನಿರ್ದೇಶಕರು, ನಿರ್ಮಾಪಕರು, ಕಥೆಗಾರರು, ಪ್ರೇಕ್ಷಕರು ಪ್ರತಿಯೊಬ್ಬರೂ ಜವಾಬ್ದಾರಿಯುತ ನಿಲುವು ವಹಿಸಿ, ಈ ಅಸಮಾನತೆ ತೊಲಗುವ ಕಡೆ ಹೆಜ್ಜೆ ಇಡಬೇಕು.

LGBTQ + ಸಮುದಾಯದವರು ಪ್ರಾಮಾಣಿಕವಾಗಿ ಹಾಗೂ ಸಬಲೀಕರಣದ ನೋಟದಿಂದ ಚಿತ್ರಿತಗೊಳ್ಳಬೇಕಾದ ಅಗತ್ಯವಿದೆ. ಸಮಾನತೆ ಕೇವಲ ಸಾಮಾಜಿಕ ಆಶಯವಾಗಿರದೆ, ಅದು ಮಾನವೀಯ ಹಕ್ಕು ಕೂಡ ಹೌದು. ಕಲ್ಪನೆಯ ಬೀಜ ಸಮಾಜದ ಮೇಲೆ ಆಳವಾಗಿ ಬೇರೂರಿ ನಷ್ಟ ತುಂಬುವ ಮೊದಲು ನಾವೆಲ್ಲ ಎಚ್ಚೆತ್ತು ಬದಲಾವಣೆಯ ಭಾಗವಾಗುವ ಸಂಕಲ್ಪ ಮಾಡೋಣ.

## ಪರಾಮರ್ಶನ ಗ್ರಂಥಗಳು:

1. ಜ್ಯೋತಿ ಶಂಕರ್, (2009), ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಕಮಲ್ ಕುಮಾರ್ & ಸಂತೋಷ್ ಕುಮಾರ್, (2012) ಉದ್ಯೋಗಸ್ಥ ಮಹಿಳೆಯರ ಹಕ್ಕುಗಳು, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ.

**Funding:**
This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.